ವಿಷಯ: ಹಾಸನ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳ 5 ಕಿ.ಮೀ. ವ್ಯಾಪ್ತಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು ರೈತರನ್ನು ವಂಚಿಸಿ ಕಾನೂನುಬಾಹಿರವಾಗಿ ಬಡಾವಣೆಗಳನ್ನು ನಿರ್ಮಿಸುತ್ತಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳ 5 ಕಿ.ಮೀ. ವ್ಯಾಪ್ತಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು ರೈತರನ್ನು ವಂಚಿಸಿ ಕಾನೂನುಬಾಹಿರವಾಗಿ ಬಡಾವಣೆಗಳನ್ನು ನಿರ್ಮಿಸುತ್ತಿರುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಉತ್ತರ ಬಂದಿಲ್ಲ.

ಅಧ್ಯಕ್ಷರು: ಬಂದಿಲ್ಲವೆಂದರೆ ತರಿಸಿ ಕೊಡಿ, ಉತ್ತರ ಬಂದಿಲ್ಲವಂತೆ, ಮಂತ್ರಿಗಳು ಏನು ಉತ್ತರ ಹೇಳುತ್ತೀರೋ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಹಾಸನದ Urban Development Authority, ನಗರಾಭಿವೃದ್ಧಿ ಪ್ರಾಧಿಕಾರದ ಸಹಾಯಕ ನಿರ್ದೇಶಕರು, ಹಾಗೂ ನಗರ ಮತ್ತು ಗ್ರಾಮಾಂತರ ಯೋಜನೆಯ ವ್ಯಾಪ್ತಿಯಲ್ಲಿ ಕಂದಾಯ ಭೂಮಿಯನ್ನು ಯಾವುದೇ ರೀತಿಯಲ್ಲಿ ಅನಧಿಕೃತವಾಗಿ ಅಭಿವೃದ್ದಿಪಡಿಸಲು ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ಯಾವುದೇ ರೀತಿಯಾದ ಸಹಕಾರವನ್ನು ನೀಡುತ್ತಿಲ್ಲ. ಅದರಲ್ಲಿ ಭೂ ಪರಿವರ್ತನೆ ಮಂಜೂರಾದ ಸಂದರ್ಭದಲ್ಲಿ ಸಂಬಂಧಪಟ್ಟ ತಹಶೀಲ್ದಾರ್ ಅವರಿಂದ ಜಮೀನಿನ ಹಕ್ಕುದಾರಿಕೆ ಮತ್ತು ಸಂಪೂರ್ಣ ಮಾಹಿತಿ ಮತ್ತು ವರದಿ ಆಧರಿಸಿ ಮಂಜೂರಾತಿ ಮಾಡಲಾಗುತ್ತಿದೆ. ಕಂದಾಯ ಭೂಮಿಯಲ್ಲಿ ಕಾನೂನು ಬಾಹಿರವಾಗಿ ರಿಯಲ್ ಎಸ್ಟೇಟ್ ಉದ್ಯಮಿಗಳು ಅಭಿವೃದ್ಧಿಪಡಿಸುತ್ತಿದ್ದಲ್ಲಿ, ನಿಯಮಾನುಸಾರ ಕಂದಾಯ ಇಲಾಖೆ ಹಾಗೂ KTCP ಕಾಯಿದೆ 1961 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ

ಅಧಿನಿಯಮ 1982ರ ಅಡಿಯಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇವೆ.

ಅಧ್ಯಕ್ಷರು: ತಹಶೀಲ್ದಾರ್‌ಗಳ ಎಡವಟ್ಟಿನಿಂದಾಗಿ ಇಂಥವುಗಳಾಗಿರುತ್ತವೆ, ಒಂದು, ನಿಮ್ಮ ಸ್ವಂತ ಜಮೀನನ್ನಾದರೂ conversion ಮಾಡಿ, layout ಮಾಡಿ, ಇಲ್ಲವೇ ಸರ್ಕಾರಿ ಜಮೀನಾಗಿದ್ದರೆ, ಮಂಜೂರು ಮಾಡಿಸಿಕೊಂಡು layout ಮಾಡಿ. ಸುಮ್ಮನೆ ಹೇಳಿದರೆ ಆಗುವುದಿಲ್ಲ. ತಹಶೀಲ್ದಾರ್ ಮೇಲೆ ನೀವು ಕಟ್ಟುನಿಟ್ಟಿನ ಆದೇಶ ನೀಡಿ ಇದನ್ನು ಮಾಡಿ. ರೇವಣ್ಣನವರೆ, ಅದು ಯಾವ ಗ್ರಾಮ ಸರ್ವೇ ನಂಬರ್ ವಿವರ ಕೊಡಿ, direction ಕೊಡುತ್ತಾರೆ.

ಶ್ರೀ ಹೆಚ್.ಎಸ್. ಪ್ರಕಾಶ್: ತಮ್ಮ ಮೂಲಕವೇ ಮಾನ್ಯ ಸಚಿವರಿಗೆ ಸರ್ವೇ ನಂಬರ್ ಫೋಟೊ ಸಹಿತ ಕೊಡುತ್ತಿದ್ದೇವೆ, ದಯಮಾಡಿ verify ಮಾಡಲಿ.

ಶ್ರೀ ಎ. ಮಂಜು: ಮಾನ್ಯ ರೇವಣ್ಣನವರು, ಪ್ರಥಮ ಬಾರಿಗೆ ಒಳ್ಳೆಯ ಪ್ರಶ್ನೆಯನ್ನು ತಂದಿದ್ದಾರೆ, ನಿಜವಾಗಿಯೂ ಬಹಳ ಸ್ವಾಗತ ಮಾಡುತ್ತೇನೆ. ಅವರು ಕೇಳಿರುವುದು ಕೆಲವು ಊರುಗಳು ಮಾತ್ರ ಹಾಸನ ಜಿಲ್ಲೆಯ 5 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲವೂ ಸೇರುತ್ತದೆ.

ಅಧ್ಯಕ್ಷರು: ನಿಮ್ಮದನ್ನು ಕೊಡಿ.

ಶ್ರೀ ಎ. ಮಂಜು: ಆಗಬಹುದು.

ಶ್ರೀ ಹೆಚ್.ಎಸ್. ಪ್ರಕಾಶ್: Sir, ಆ ಊರು ಈ ಊರು ಎಂದಲ್ಲ, ಅವರು specific ಆಗಿ ಹೇಳಿಲ್ಲವೆನ್ನುತ್ತಾರೆ.

ಅಧ್ಯಕ್ಷರು: ನೀವೇ ಇಂಥ ಗ್ರಾಮದಲ್ಲಿ ಈ ಸರ್ವೇ ನಂಬರ್ ಎಂದು specific ಆಗಿ ಕೇಳಿಲ್ಲ ಗೊತ್ತಾ? ಎಲ್ಲಿ ಕೊಟ್ಟಿದ್ದೀರಿ?

ಶ್ರೀ ಹೆಚ್.ಎಸ್. ಪ್ರಕಾಶ್: ಸರ್ವೇ ನಂಬರ್, ಗ್ರಾಮ ಎಲ್ಲಾ ಕೊಟ್ಟು ಆಗಿದೆ.

ಅಧ್ಯಕ್ಷರು: ನಿಮ್ಮ ನೋಟಿಸ್‌ನಲ್ಲಿ ಕೊಟ್ಟಿದ್ದೀರಾ?

ಶ್ರೀ ಹೆಚ್.ಎಸ್. ಪ್ರಕಾಶ್: ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಗಮನಸೆಳೆಯುವ ಸೂಚನೆ 19ರಲ್ಲಿ ಇದೆ.

ಅಧ್ಯಕ್ಷರು: ನೀವು ಕೊಟ್ಟಿರುವುದರಲ್ಲಿ ಸರ್ವೇ ನಂಬರ್, ಗ್ರಾಮವಿಲ್ಲ. ಕಳುಹಿಸಿಕೊಡಿ, ಅಷ್ಟು ಮಾಡಿ.

ವಿಷಯ: ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2014–15ನೇ ಸಾಲಿನ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿ): ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನಲ್ಲಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಿ ಮಂಜೂರಾತಿಯಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಆದರೆ ಈ ಸಾಲಿನ ಯೋಜನೆಯಡಿಯಲ್ಲಿ ಹೊಸ ಕಾಮಗಾರಿಗಳ ಅವೆಂಡಿಕ್ಸ–ಇ ಗಳನ್ನು ಪರಿಶೀಲಿಸಲಾಗಿ ಪ್ರಸ್ತಾವನೆ ಸಲ್ಲಿಸಿದ್ದ ಫಲಾನುಭವಿಗಳ ಬದಲಾಗಿ ಬೇರೆ ಫಲಾನುಭವಿಗಳು ಆಯ್ಕೆಯಾಗಿರುವುದು ಕಂಡುಬಂದಿದ್ದು, ಈ ಲೋಪದೋಷಗಳನ್ನು ಸರಿಪಡಿಸುವ ಹಾಗೂ ಫಲಾನುಭವಿಗಳ ಆಯ್ಕೆಗೆ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳ ಬಗ್ಗೆ ಮಾನ್ಯ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.